





## ಅಡಿಕೆ ಮರ ಸಹಾಯಕ ಕಡಕುಮಣೆ

ಅಡಿಕೆ ಬೆಳೆಗಾರರಿಗೆ ಕೊನೆ ಕೊಯ್ಲು ಹಾಗೂ ಮದ್ದು ಸಿಂಪಡಣೆ ತುಂಬಾ ಕಷ್ಟದ ಕೆಲಸ. ಈ ಕೆಲಸ ಮಾಡಲು ಪರಿಣತಿ, ನೈಪುಣ್ಯ, ಏಕಾಗ್ರತೆ ಬಹಳ ಮುಖ್ಯ. ಮರ ಏರುವವನಿಗೆ ಉದ್ದನೆಯ ದೋಟಿ, ಹಗ್ಗ, ಮೋಟುಗತ್ತಿ, ಕಾಲಲ್ಲಿ ತಳೆ, ಮರ ಏರಿ ಕುಳಿತುಕೊಳ್ಳಲು ಕಡಕುಮಣೆ ಬೇಕು. ಚಿತ್ರದಲ್ಲಿರುವುದು ಕಡಕುಮಣೆ. ಇದನ್ನು ಮೇಲ್ಮುಖವಾಗಿ ಜಾರಿಸುತ್ತಾ 60–70 ಅಡಿ ಎತ್ತರದ ಅಡಿಕೆ ಮರ ಏರಿ ಈ ಮಣೆಯ ಮೇಲೆ ಕುಳಿತು ಎರಡೂ ಕೈ ಬಳಸಿ ದೋಟಿಯ ಮೂಲಕ ಪಕ್ಕದ ಮರ ಎಳೆದು ಬಾಗಿಸಿ ಕೊನೆ ಕೊಯ್ಲು ಔಷಧಿ ಸಿಂಪಡಣೆ ಮಾಡಬೇಕು.

ಮಣೆ ಮಧ್ಯದಲ್ಲಿನ ರಂಧ್ರದ ಮೂಲಕ ಹಗ್ಗ ಪೋಣಿಸಿ ಬಿಗಿಯಾಗಿ ಕಟ್ಟಲಾಗುತ್ತದೆ. ಈ ಹಗ್ಗವನ್ನು ಏರಿದ ಮರಕ್ಕೆ ಕಟ್ಟಿ ಕುಳಿತು ಕೆಲಸ ಮಾಡಬೇಕು. 60–70 ಕೆ.ಜಿ. ತೂಕದ ವ್ಯಕ್ತಿ ಸಹ ಮಣೆ ಮೇಲೆ ಕುಳಿತುಕೊಳ್ಳಬಹುದು. ಕಡಕುಮಣೆಯು ಎರಡರಿಂದ ಎರಡು ಕಾಲು ಅಡಿ ಉದ್ದ, ನಾಲ್ಕರಿಂದ ಐದು ಇಂಚು ಅಗಲವಿದ್ದು ಇದನ್ನು ಹಲಸಿನ ಮರದ, ಹುಣಸೆ ಮರದ ಬೇರು ಅಥವಾ ಬೀಟೆ ಮರದಿಂದ ತಯಾರಿಸುತ್ತಾರೆ. ಮರ ಏರಿ ಕೆಲಸ ಮಾಡಿದ ದಿನ ಬೆಂಕಿಯ ಕಾವು ನೀಡಿ ಮಣೆಯನ್ನು ಒಣಗಿಸಲಾಗುತ್ತದೆ. ಗಟ್ಟಿಮುಟ್ಟಾದ ಈ ಮಣೆ 30ರಿಂದ 40 ವರ್ಷ ಬಾಳಿಕೆ ಬರುತ್ತದೆ. ಕಡಕುಮಣೆ ಮುರಿದು ಬಿದ್ದು ಅನಾಹುತವಾದ ಘಟನೆಗಳು ಅಪರೂಪ.


—ಜಯಪ್ರಕಾಶ ತಲವಾಟ, ಸಾಗರ

## ಮಯೂರ ಶಿಖೆ

ಬೆಟ್ಟ, ಗುಡ್ಡಗಳಲ್ಲಿ ಸುತ್ತಾಡುವಾಗ, ಬಂಡೆಗಳ ಸಂದಿಯಲ್ಲಿ ಕಾಣಸಿಗುವ ನವಿಲು ಜುಟ್ಟಿನ ಆಕಾರದ ಸಸ್ಯ ನಮ್ಮ ಗಮನಸೆಳೆಯುತ್ತದೆ. ಬಿಸಿಲು ಹೆಚ್ಚಾಗಿರುವ ಮತ್ತು ಮಳೆ ಕಡಿಮೆ ಬೀಳುವ ಪ್ರದೇಶಗಳಲ್ಲಿ ಈ ಗಿಡ ಹೆಚ್ಚಾಗಿ ಬೆಳೆಯುತ್ತದೆ. ಜರಿ ಗಿಡದ ಕುಟುಂಬಕ್ಕೆ ಸೇರಿದ **Actnio Pteris** ವೈಜ್ಞಾನಿಕ ಹೆಸರುಳ್ಳ ಈ ಗಿಡವನ್ನು ಕನ್ನಡದಲ್ಲಿ ನವಿಲು ಜುಟ್ಟು, ಮಯೂರ ಶಿಖೆ ಎಂದು ಕರೆಯಲಾಗುತ್ತದೆ. ನವಿಲು ಜುಟ್ಟಿನಂತೆ ಕಾಣುವ ಈ ಗಿಡದ ಎಲೆಗಳು ಗಾಢ ಹಸುರು ಬಣ್ಣದಿಂದ ಕೂಡಿದ್ದು, ದಂಟಿನ ಸುತ್ತಲೂ 180 ಡಿಗ್ರಿ ಕೋನದಲ್ಲಿ ಹರಡಿಕೊಂಡಿರುತ್ತವೆ. ಚೀನೀಯರು ಉಪಯೋಗಿಸುವ ಬೀಸಣಿಕೆಯನ್ನು ಹೋಲುತ್ತವೆ. 10 15 ಸೆಂ.ಮೀ. ಎತ್ತರ ಬೆಳೆಯುವ ಮಯೂರ ಶಿಖೆ ಎಲೆಗಳನ್ನು ಔಷಧಿ ರೂಪದಲ್ಲಿ ಬಳಸಲಾಗುತ್ತದೆ.

—ಜಿ.ಪದ್ಮಾ, ಸಂಡೂರು





## ಬಟ್ಟೆ ನೇಯುವ ಮರದ ಯಂತ್ರ

ಒಂದೂವರೆ ಶತಮಾನಕ್ಕೂ ಹಿಂದೆ ಹಳ್ಳಿಯ ಮನೆಯಲ್ಲಿ ನೂಲಿನಿಂದ ಬಟ್ಟೆ ನೇಯುತ್ತಿದ್ದ ಯಂತ್ರವಿದು. ಬಡಗಿಗಳ ಕೌಶಲದಲ್ಲಿ ಮರದಲ್ಲಿ ಅರಳಿದ ಈ ಯಂತ್ರದಲ್ಲಿ ಚಕ್ರಗಳ ಹೊರತಾಗಿ ಬೇರೆಡೆ ಲೋಹ ಬಳಸದೆ ಇರುವುದು ಇದರ ವಿಶೇಷ. ಚಕ್ರಗಳಿಗೆ ನೂಲಿನ ಉಂಡೆ ಜೋಡಿಸಿ ಬಟ್ಟೆ ನೇಯಲಾಗುತ್ತಿತ್ತು. ರಂಗಕರ್ಮಿ ಬಿ.ವಿ. ಕಾರಂತರ ತಾಯಿಯ ತವರುಮನೆಯಲ್ಲಿ (ಕುಕ್ಕಾಜೆ ಬಳಿ) ಜೋಪಾನವಾಗಿದ್ದ ಈ ಯಂತ್ರವೀಗ, ಮಂಚಿಯ ಶಿವಶಂಕರ ಭಟ್ಟರ ಸಂಗ್ರಹದಲ್ಲಿದೆ.

—ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ